ಬ್ರಹ್ಮಾವರ :

ಪಾವಂಜೆ, ಮುಗ್ಗೇರಿ, ಗಿಳಿಯಾರು, ಬನ್ನಾಡಿ, ಮಣೂರು, ಬೆಣ್ಣೆಕುದ್ರು, ಹೊಸಾಳ, ಐರೋಡಿ, ಕಲ್ಯಾಣಪುರ, ಪಡುತೋನ್ಸೆ, ಸಾಸ್ತಾನ, ಚಾಂತಾರು, ಆರೂರು, ಪಾಂಡೇಶ್ವರ, ನೀಲಾವರ, ಹನೆಹಳ್ಳಿ, ವಾರಂಬಳ್ಳಿ, ಉಪ್ಪೂರು, ಕೋಡಿ, ಸಾಲಿಗ್ರಾಮ, ಕರ್ಕಡ, ಪೆರ್ಡೂರು, ಕೊಕ್ಕರ್ಣೆ, ಚೇರ್ಕಾಡಿ.

ಬೈಂದೂರು :

ಕಟ್ಟೆಬೆಳ್ಳೂರು, ಹಕ್ಲಾಡಿ, ಗುಜ್ಜಾಡಿ, ಕಳಿಹಿತ್ಲು, ಕೊಲ್ಲೂರು, ಕರ್ಕಾಡಿ, ಕಬ್ಬ, ಕೊಡೇರಿ, ಗುಲ್ವಾಡಿ, ಹೆರಂಜಾಲು, ಕುಂಬದಕೋಣೆ, ಮಯಾಡಿ (ಬೈಂದೂರು), ಶಿರೂರು, ಕಾರ್ಗಲ್ಲು, ಮರವಂತೆ, ತೆಗ್ಗರ್ಸೆ, ಕಾಲ್ತೋಡು, ಉಪ್ಪಂದ, ಕೆಂಚನೂರು, ತ್ರಾಸಿ, ವ�ಂಡಿಸೆ, ಕುಂದಬಾರಂಬಡಿ, ಪಡುವರಿ, ಗಂಗೊಳ್ಳಿ, ಕೊರಾಡಿ, ಹಡವು, ಬಡಾಕೆರೆ, ಸೇನಾಪುರ, ಹೊಸಾಡು, ಉಪ್ಪನಕುದ್ರು, ನಾಡಾ, ಉಳ್ಳೂರು, ಹೆಮ್ಮಾಡಿ, ಹರ್ಕೂರು, ಹೆಮ್ಮುಂಜೆ (ಆಲೂರು) ಎಡ್ತೆರೆ, ಬಿಜೂರು, ಕೊಡ್ಲಾಡಿ, ಕಿರುಮುಂಜೇಶ್ವರ, ಗೋಳಿಹೊಳೆ.

ಕುಂದಾಪುರ :

ಬಸ್ರೂರು, ಬಾರ್ಕೂರು, ಅನಗಳ್ಳಿ ಹಲ್ನಾಡು, ಗೋಳಿಯಂಗಡಿ, ಕಾವ್ರಾಡಿ, ಕಂಡ್ಲೂರು, ತೆಕ್ಕಟ್ಟೆ, ಬೇಲೂರು, ಕಾಮತರಕುದ್ರು, ಹೇರಿಕುದ್ರು, ಮದ್ದುಗುಡ್ಡೆ, ಗಂಗೊಳ್ಳಿ, ಬೀಜಾಡಿ, ಕೋಟೇಶ್ವರ, ಕುಂಭಾಶಿ, ರಾಗಿಹಿತ್ಲು, ಎಡ್ಯಾಡಿ, ಮತ್ಯಾಡಿ, ಬೆಟ್ಟುಕುದ್ರು, ಹುಣ್ಸೆಮಕ್ಕಿ, ರಟ್ಟಾಡಿ, ಗೋಪಾಡಿ, ಸಿದ್ದಾಪುರ, ಜಪ್ತಿ, ಖಾರ್ವಿಕೇರಿ, ಹೇರೂರು, ಎಳಂತೂರು.

ಕಾರ್ಕಳ :

ಮಿಯಾರು, ರೆಂಜಾಳ, ಮಾಳ, ಶಿವಪುರ, ಅಂಡಾರು, ಹಿರ್ಗಾನ, ಕೆರ್ವಾಶೆ, ಕುಚ್ಚೂರು, ಇನ್ನಾ, ಕಾರ್ಕಳ, ಮುಂಡ್ಕೂರು, ಬೋಳ, ಚಾರ, ಕಡ್ತಲ, ಬೆಳ್ಮಣ್ಣು, ಮುದ್ರಾಡಿ, ಎರ್ಲತ್ತೂರು, ಬೆಳಂಜೆ, ಕುಕ್ಕುಂದೂರು, ನಲ್ಲೂರು, ಸೂಡಾ, ಈದು.

ಕಾಪು :

ಫಲಿಮಾರು, ಹೆಜಮಾಡಿ, ಪಡುಬಿದ್ರಿ ಉಳಿಯಾರಗೋಳಿ, ಕಟ್ಟಂಗೇರಿ, ಮೂಡಬೆಟ್ಟು, ಕಟ್ಟಾಡಿ, ಮುಂಡ್ಕೂರು, ಇನ್ನಾ, ಬೆಳಪು, ಎಳ್ಳೂರು .

5256(5144) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವರ್ಷ ಸಮುದ್ರ ಕೊರೆತ ಉಂಟಾಗಿ ಸಮುದ್ರ ತೀರದಲ್ಲಿ ವಾಸಿಸುವ ಮೀನುಗಾರರ ಹಾಗೂ ಇತರೆ ವರ್ಗದವರ ಮನೆ, ಆಸ್ತಿಪಾಸ್ತಿ ಮತ್ತು ಮೀನುಗಾರಿಕಾ ರಸ್ತೆಗಳಿಗೆ ಆಹಾರ ಹಾನಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಪ್ರತಿ ವರ್ಷ ತುರ್ತು ಕಾಮಗಾರಿಗಳ ನೆಪದಲ್ಲಿ ಸರ್ಕಾರದ ಬೊಕ್ಕಸದಿಂದ ನೂರಾರು ಕೋಟಿ ವ್ಯಯ ಮಾಡುವುದಕ್ಕಿಂತ ಸಮುದ್ರ ಕೊರೆತ ತಡೆಗಟ್ಟಲು ಶಾಶ್ವತ ಯೋಜನೆಯನ್ನು ಸರ್ಕಾರ ರೂಪಿಸಲಾಗುವುದೇ;

ರೂಪಿಸಿದ್ದಲ್ಲಿ ಅನುಷ್ಟಾನಗೊಳಿಸುವುದು ಯಾವಾಗ ;

ಇ) ಉಡುಪಿ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸಮುದ್ರ ತಡೆಗೋಡೆ ನಿರ್ಮಿಸಲು ಉದ್ದೇಶಿಸಿರುವ ಪ್ರದೇಶಗಳು ಯಾವುವು; (ವಿಧಾನ ಸಭಾವಾರು ವಿವರ ಒದಗಿಸುವುದು) ;

ಈ) ಈ ಯೋಜನೆಗಳು ವಿಳಂಬವಾಗಿ ಅನುಷ್ಠಾನಗೊಳ್ಳುವುದರಿಂದ ಸರ್ಕಾರದ ಬೊಕ್ಕಸಕ್ಕೆ ಅಧಿಕ ನಷ್ಟ ಉಂಟಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕಾರ್ಯತತ್ಪರವಾಗುವುದೇ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು

ಆ) ಮಳೆಗಾಲದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ಸಾರ್ವಜನಿಕ ಆಸ್ತಿಪಾಸ್ತಿ ಜೀವ ಹಾನಿ ರಕ್ಷಣೆಗೊಸ್ಕರ ತುರ್ತು ಸಂರಕ್ಷಣೆ ಕಾಮಗಾರಿ ಕೈಗೊಳ್ಳಲಾಗುವುದು ಅವಶ್ಯವಿರುತ್ತದೆ. ರಾಜ್ಯದಲ್ಲಿ ಈವರೆಗೆ ಸುಮಾರು 55. ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ. ಕುಂದಾಪುರ ತಾಲ್ಲೂಕು ಪಡುವರಿಯಲ್ಲಿ ಸುಮಾರು 1170 ಮೀ. ಉದ್ದಕ್ಕೆ ಕೇಂದ್ರ ಪುರಸ್ಕೃತ ಯೋಜನೆಯ ಶಾಶ್ವತ ತಡೆಗೋಡೆ ನಿರ್ಮಿಸಲು ಮಂಜೂರಾತಿ ದೊರೆತಿದ್ದು ಶೀಘ್ರವೇ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದ್ದು National Coastal Protection Project(NCPP) ಯೋಜನೆಯಡಿ ಸುಮಾರು 49.895 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಕೇಂದ್ರ ಸರ್ಕರದಿಂದ ಮಂಜೂರಾತಿ ದೊರೆತ ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ.

ಇ) NCPP(National Coastal Protection Project) ಯೋಜನೆ ಹಾಗೂ ಇತರೆ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ ಕೈಗೊಳ್ಳಲು ಉದ್ದೇಶಿಸಿ ಶಾಶ್ವತ ತಡೆಗೋಡೆ ನಿರ್ಮಾಣದ ವಿವರ ವಿಧಾನ ಸಭಾ ಕ್ಷೇತ್ರಾವಾರು ಈ ಕೆಳಗಿನಂತಿದೆ :–

ಕ್ರ. ಸಂ.	ಸ್ಥಳ	ಶಾಶ್ವತ ತಡೆಗೋಡೆ ಉದ್ದ (ಕಿ.ಮೀ.ಗಳಲ್ಲಿ)	ಒಟ್ಟು
	ಕಾಪು		
1	ಹೆಜಮಾಡಿ	1.340	
2	ಕಡಿಪೆಟ್ಟ	1,850	
3	ತೆಂಕ ಎರ್ಮಾಳ್	0.900	
4	ಬಡಾ ಎರ್ಮಾಳ್	1.025	
5	ಉಚ್ಚಿಲ	0.300	
6	ಮೂಳೂರು	0.300	
7	ಪೊಲಿಪು ಪಡು	0.020	
8	ಉಳಿಯರಗೋಳಿ	0.450	6.785
	ಉಡುಪಿ		
9	ಉಳಿಯರಗೋಳಿ ಪಡುಕೆ	1.00	1.00

	ಬ್ರಹ್ಮಾವರ		
10	ಹೊಡೆ ಕೆಮ್ಮಣ್ಣು	0.945	
11	ಕೋಡಿ ಬೆಂಗ್ರೆ	0.150	
12	ಹೊಸ ಬೆಂಗ್ರೆ	0.000	
13	ಕೋಡಿ ಕನ್ಯಾನ	0.850	
14	ಪರಂಪಳ್ಳಿ ಪಡುಕೆರೆ	0.700	
15	ಕೊಟಕಟ್ಟು	1.270	
16	ಮಣೂರು ಪಡುಕೆರೆ	0.850	5.565
	ಕುಂದಾಪುರ		
17	ಬಿಜಾಡಿ	0.450	
18	ಕಡಬಕೋಡಿ	0.440	0.890
	ಬೈಂದೂರು		
19	ಮರವಂತೆ	1.050	
20	ನಾವುಂದಾ	0.400	
21	ಅದ್ರಗೋಳಿ	0.600	
22	ಹೊಸಹಿತ್ಲು	0.850	
23	ಗಂಗೆ ಬೈಲು	0.100	
24	ಉಪ್ಪುಂದ ಅಮ್ಮನವರ ತೊಪ್ಪಲು	0.975	
25	ಆಳ್ವೆ ಕೋಡಿ	1.370	
26	ಕಳಿ ಹಿತ್ಲು	0.600	
27	ಪಡುವರಿಯಲ್ಲ	1170.00	7.115
		21.355	

ಈ) ಯೋಜನೆಗಳು ವಿಳಂಬವಾಗಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟವನ್ನು ಗಂಭೀರವಾಗಿ ಪರಿಗಣಿಸಿದ್ದು NCPP ಯೋಜನೆಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯುವ ಬಗ್ಗೆ ಸರ್ಕಾರದ ಮಟ್ಟದ ಗಂಭೀರ ಪ್ರಯತ್ನ ನಡೆಯುತ್ತಿದೆ. ಉಳಿದ ಯೋಜನೆಗಳನ್ನು ಆದಷ್ಟು ತೀವ್ರ ಅನುಷ್ಠಾನಗೊಳಿಸುವ ಬಗ್ಗೆ ಪ್ರಯತ್ನ ನಡೆಯುತ್ತಿದೆ.

5257(5145) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ಜಿಲ್ಲೆಯಲ್ಲಿ ಗೇರು ಕೃಷಿ ಅಭಿವೃದ್ಧಿಗಾಗಿ ಎಷ್ಟು ಮಂದಿ ರೈತರಿಗೆ ಯಾವ ವರ್ಷದಲ್ಲಿ ಲೀಸ್ ಆಧಾರದ ಮೇಲೆ ನೀಡಲಾದ ಜಮೀನಿನ ವಿಸ್ತೀರ್ಣವೆಷ್ಟು;